# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 679

ಸದಸ್ಯರ ಹೆಸರು : ಶ್ರೀ ಎಸ್. ರುದ್ರೇಗೌಡ
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 22.02.2022.

ಉತ್ತರಿಸುವವರು : ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿ ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಣ್ಣ ಮತ್ತು ಮದ್ಯಮ ಕೈಗಾರಿಕೆಗಳ ಪುನಃಶ್ಚೇತನದ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ; | **ಕೋವಿಡ್-19 ರಿಂದ ಆರ್ಥಿಕ ತೊಂದರೆಯಾಗಿ ಸಂಕಷ್ಟದಲ್ಲಿರುವ ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರದಿಂದ ಈ ಕೆಳಗಿನ ಯೋಜನೆ ಜಾರಿಗೊಳಿಸಲಾಗಿರುತ್ತದೆ.**<br>1. ಇಂಧನ ಇಲಾಖೆಯು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಏಪ್ರಿಲ್ ಮತ್ತು ಮೇ 2020 ತಿಂಗಳ ಬೇಡಿಕೆ ಶುಲ್ಕ ಮತ್ತು ಸ್ಥಿರ ಶುಲ್ಕವನ್ನು ಮನ್ನಾ ಮಾಡಿರುತ್ತದೆ.<br>2. ಇಂಧನ ಇಲಾಖೆಯು ವಿದ್ಯುತ್ ಬಿಲ್‌ನ್ನು ಪ್ರಾಮಾಣಿಕವಾಗಿ ನಿಗದಿತ ಅವಧಿಯೊಳಗೆ ಪಾವತಿಸುವ ಕೈಗಾರಿಕೆಗಳಿಗೆ ರಿಯಾಯಿತಿಯನ್ನು ನೀಡಿರುತ್ತದೆ. ಹೆಚ್‌ಟಿ ಗರಿಷ್ಟ ಮಿತಿ ರೂ.1 ಲಕ್ಷ, ಎಲ್‌ಟಿ ಗರಿಷ್ಟ ಮಿತಿ ರೂ.10,000/- |
| | | 1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ — ಶೇ 1% ರಿಯಾಯಿತಿ<br>6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ — ಶೇ 0.5% ರಿಯಾಯಿತಿ<br>15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ — ಯಾವುದೇ ರಿಯಾಯಿತಿ ಇರುವುದಿಲ್ಲ<br>3. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತನ್ನು ಮಾರ್ಚ್, ಏಪ್ರಿಲ್ ಮತ್ತು ಮೇ 2020 ತಿಂಗಳುಗಳಲ್ಲಿ ಪಾವತಿಸದಿದ್ದಲ್ಲಿ ಆ ಪಾವತಿಯನ್ನು ಕ್ರಮವಾಗಿ 3 ತಿಂಗಳು ಮುಂದೂಡಲಾಗಿದೆ ಮತ್ತು ಈ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಿರುವುದಿಲ್ಲ. |

| | |
|---|---|
| 1 ರಿಂದ 5 ದಿನದೊಳಗೆ ಪಾವತಿಸಿದಲ್ಲಿ | ಶೇ 1% ರಿಯಾಯಿತಿ |
| 6 ರಿಂದ 15 ದಿನದೊಳಗೆ ಪಾವತಿಸಿದಲ್ಲಿ | ಶೇ 0.5% ರಿಯಾಯಿತಿ |
| 15 ರಿಂದ 30 ದಿನದೊಳಗೆ ಪಾವತಿಸಿದಲ್ಲಿ | ಯಾವುದೇ ರಿಯಾಯಿತಿ ಇರುವುದಿಲ್ಲ |

<table>
<tr>
<td></td>
<td></td>
<td>4. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಉದ್ಯಮಶೀಲರು ತಮಗೆ ಹಂಚಿಕೆಯಾದ ನಿವೇಶನಗಳ ಕಂತು, ಮಳಿಗೆಗಳ ಬಾಡಿಗೆ ಮತ್ತು ನೀರಿನ ಶುಲ್ಕಗಳ ಏಪ್ರಿಲ್, ಮೇ ಮತ್ತು ಜೂನ್ 2020 ತಿಂಗಳುಗಳ ಕಂತನ್ನು ಈ ಕೆಳಗಿನಂತೆ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಇದಕ್ಕೆ ಯಾವುದೇ ಬಡ್ಡಿಯನ್ನು ವಿಧಿಸಲಾಗುವುದಿಲ್ಲ.
<table>
<tr><td>ಏಪ್ರಿಲ್ 2020 ತಿಂಗಳ ಕಂತು</td><td>ಜೂನ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
<tr><td>ಮೇ 2020 ತಿಂಗಳ ಕಂತು</td><td>ಜುಲೈ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
<tr><td>ಜೂನ್ 2020 ತಿಂಗಳ ಕಂತು</td><td>ಆಗಸ್ಟ್ 2020 ತಿಂಗಳ ಕಂತಿನ ಜೊತೆ ಪಾವತಿಸತಕ್ಕದ್ದು</td></tr>
</table>
ಕೋವಿಡ್-19ರ 2ನೇ ಅಲೆಯ ನಂತರ ರಾಜ್ಯ ಸರ್ಕಾರದ ಇಂಧನ ಇಲಾಖೆಯು ದಿನಾಂಕ 21.06.2021ರ ಆದೇಶದಂತೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಪಾವತಿಸಬೇಕಾದ ಮೇ ಮತ್ತು ಜೂನ್ 2021ರ ತಿಂಗಳ ಬೇಡಿಕೆ / ನಿಗಧಿತ ಶುಲ್ಕವನ್ನು ಮನ್ನಾ ಮಾಡಿರುತ್ತದೆ.
ಕೋವಿಡ್-19 ರಿಂದ ಆರ್ಥಿಕ ತೊಂದರೆಯಾಗಿ ಸಂಕಷ್ಟದಲ್ಲಿರುವ ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹ ನೀಡಲು ಕೇಂದ್ರ ಸರ್ಕಾರದಿಂದ ಈ ಕೆಳಗಿನ ಯೋಜನೆ ರೂಪಿಸಲಾಗಿರುತ್ತದೆ.
ಕೇಂದ್ರ ಸರ್ಕಾರ ಘೋಷಿಸಿರುವ "ಆತ್ಮ ನಿರ್ಭರ ಭಾರತ ಅಭಿಯಾನ" ದ ಅಡಿಯಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಮತ್ತು ಉದ್ಯಮಗಳಿಗೆ ಆರ್ಥಿಕ ನೆರವು ನೀಡುವ ಯೋಜನೆಯಲ್ಲಿ ಭಾರತ ಸರ್ಕಾರವು "ಇ.ಸಿ.ಎಲ್.ಜಿ"-ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದು ಇದರನ್ವಯ ಫೆಬ್ರುವರಿ 2020ರ ಅಂತ್ಯಕ್ಕೆ ಬ್ಯಾಂಕ್‌ಗಳಲ್ಲಿ ಬಾಕಿ ಇರುವ ಎಂ.ಎಸ್.ಎಂ.ಇ ಘಟಕಗಳ ಸಾಲದ ಮೊತ್ತಕ್ಕೆ ಶೇ 20% ರಷ್ಟು ಹೆಚ್ಚುವರಿ ಸಾಲವನ್ನು ಯಾವುದೇ ಹೆಚ್ಚುವರಿ ಖಾತರಿ ಇಲ್ಲದೇ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ. </td>
</tr>
<tr>
<td>ಆ)</td>
<td>2020-21, 2021-22ನೇ ಹಣಕಾಸಿನ ವರ್ಷದ 2021ರ ಡಿಸೆಂಬರ್‌ವರೆಗೆ ಸ್ಥಾಪನೆಯಾದ ಜಿಲ್ಲಾವಾರು ಕೈಗಾರಿಕೆ ಘಟಕಗಳೆಷ್ಟು;</td>
<td>2020-21, 2021-22ನೇ ಹಣಕಾಸಿನ ವರ್ಷದ 2022ರ ಜನವರಿವರೆಗೆ ಉತ್ಪಾದನೆ / ಸೇವೆ ಪ್ರಾರಂಭಿಸಿ ಕೇಂದ್ರ ಸರ್ಕಾರದ "ಉದ್ಯಮ ರಿಜಿಸ್ಟ್ರೇಷನ್" ಪೋರ್ಟಲ್‌ನಲ್ಲಿ ನೋಂದಣಿಯಾದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td>
</tr>
</table>

| | | |
|---|---|---|
| ಇ) | ಕರ್ನಾಟಕ ರಾಜ್ಯದ ಮಹಾತ್ವಾಕಾಂಕ್ಷಿ ಯೋಜನೆ 'ಉದ್ಯಮಿಯಾಗು ಉದ್ಯೋಗ ನೀಡು' ಎಂಬ ಅಭಿಯಾನದಡಿ ಸ್ಥಾಪನೆಯಾದ ಕೈಗಾರಿಕೆ ಘಟಕಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | "ಉದ್ಯಮಿಯಾಗಿ ಉದ್ಯೋಗ ನೀಡು" ಕಾರ್ಯಕ್ರಮವು ವಿಶೇಷವಾಗಿ ಅಂತಿಮ ವರ್ಷದ ಇಂಜಿನಿಯರಿಂಗ್, ವೈದ್ಯಕೀಯ, ಎಂ.ಬಿ.ಎ ವಿದ್ಯಾರ್ಥಿಗಳಿಗೆ ಕೈಗಾರಿಕೆ ಪ್ರಾರಂಭಿಸುವ ಬಗ್ಗೆ, ಕೈಗಾರಿಕೆ ಇಲಾಖೆಯ ಬಗ್ಗೆ, ಕೈಗಾರಿಕಾ ವಲಯದಲ್ಲಿ ಇರುವ ಅವಕಾಶಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಮಾತ್ರ ಆಗಿರುತ್ತದೆ.<br><br>ಈ ಅಭಿಯಾನವನ್ನು ಬೆಂಗಳೂರಿನಲ್ಲಿ ದಿ: 11.10.2021 ರಂದು ಕಲಬುರಗಿಯಲ್ಲಿ ದಿ: 03.01.2022 ರಂದು ವಿಭಾಗವಾರು ನಡೆಸಲಾಗಿರುತ್ತದೆ. |
| ಈ) | ಈ ಅಭಿಯಾನದ ಅಡಿಯಲ್ಲಿ ಹೂಡಿಕೆಯಾದ ಬಂಡವಾಳ ಮತ್ತು ದೊರೆತ ಉದ್ಯೋಗಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು) | |

ಸಿಐ 43 ಸಿಎಸ್‌ಸಿ 2022

(ಎನ್. ನಾಗರಾಜು (ಎಂ.ಟಿ.ಬಿ))
ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ರುದ್ರೇಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 679ಕ್ಕೆ ಅನುಬಂಧ-1

**NUMBER OF ENTERPRISES ESTABLISHED AS PER "UDYAM REGISTRATION" PORTAL DURING 2020-21 AND 2021-22 (UPTO JAN2022) AND EMPLOYMENT PROVIDED BY THESE ENTERPRISES**

| Sl.No. | DISTRICT | 2020-21 | | 2021-22 (upto jan 2022) | | TOTAL | |
|---|---|---|---|---|---|---|---|
| | | # OF UNITS | EMPLOYMENT PROVIDED | # OF UNITS | EMPLOYMENT PROVIDED | # OF UNITS | EMPLOYMENT PROVIDED |
| 1 | BAGALKOT | 1,152 | 6,117 | 955 | 6,312 | 2,107 | 12,429 |
| 2 | BALLARI | 1,372 | 8,546 | 1,145 | 7,196 | 2,517 | 15,742 |
| 3 | BELAGAVI | 4,150 | 44,137 | 2,734 | 19,903 | 6,884 | 64,040 |
| 4 | BENGALURU (RURAL) | 3,040 | 26,357 | 2,381 | 40,903 | 5,421 | 67,260 |
| 5 | BENGALURU (URBAN) | 20,884 | 1,27,525 | 10,883 | 76,624 | 31,767 | 2,04,149 |
| 6 | BIDAR | 621 | 8,261 | 536 | 3,373 | 1,157 | 11,634 |
| 7 | CHAMARAJNAGAR | 339 | 1,524 | 243 | 1,298 | 582 | 2,822 |
| 8 | CHIKBALLAPUR | 689 | 4,004 | 521 | 6,399 | 1,210 | 10,403 |
| 9 | CHIKKAMAGALURU | 782 | 3,457 | 550 | 4,201 | 1,332 | 7,658 |
| 10 | CHITRADURGA | 832 | 4,288 | 567 | 3,379 | 1,399 | 7,667 |
| 11 | DAKSHIN KANNAD | 2,177 | 18,505 | 1,398 | 6,220 | 3,575 | 24,725 |
| 12 | DAVANGERE | 1,192 | 6,520 | 722 | 5,262 | 1,914 | 11,782 |
| 13 | DHARWAD | 2,331 | 30,331 | 1,402 | 8,069 | 3,733 | 38,400 |
| 14 | GADAG | 570 | 2,938 | 376 | 2,017 | 946 | 4,955 |
| 15 | HASSAN | 1,072 | 9,590 | 1,347 | 25,671 | 2,419 | 35,261 |
| 16 | HAVERI | 686 | 3,933 | 607 | 3,294 | 1,293 | 7,227 |
| 17 | KALABURAGI | 1,204 | 11,867 | 975 | 6,238 | 2,179 | 18,105 |
| 18 | KODAGU | 364 | 3,095 | 457 | 3,598 | 821 | 6,693 |
| 19 | KOLAR | 930 | 10,168 | 768 | 5,407 | 1,698 | 15,575 |
| 20 | KOPPAL | 491 | 15,534 | 546 | 6,119 | 1,037 | 21,653 |
| 21 | MANDYA | 979 | 6,365 | 895 | 19,819 | 1,874 | 26,184 |
| 22 | MYSURU | 2,244 | 21,441 | 1,548 | 11,525 | 3,792 | 32,966 |
| 23 | RAICHUR | 658 | 7,030 | 562 | 9,536 | 1,220 | 16,566 |
| 24 | RAMANAGARA | 636 | 8,872 | 436 | 2,352 | 1,072 | 11,224 |
| 25 | SHIVAMOGGA | 1,169 | 5,480 | 939 | 5,460 | 2,108 | 10,940 |
| 26 | TUMAKURU | 1,524 | 9,831 | 1,259 | 9,476 | 2,783 | 19,307 |
| 27 | UDUPI | 1,119 | 6,362 | 703 | 2,858 | 1,822 | 9,220 |
| 28 | UTTAR KANNAD | 1,071 | 5,191 | 722 | 4,216 | 1,793 | 9,407 |
| 29 | VIJAYAPURA | 1,387 | 19,187 | 998 | 5,677 | 2,385 | 24,864 |
| 30 | YADGIR | 606 | 9,943 | 761 | 4,991 | 1,367 | 14,934 |
| | **TOTAL** | **56,271** | **4,46,399** | **37,936** | **3,17,393** | **94,207** | **7,63,792** |